(F) "establishment in public sector" means an establishment owned, controlled or managed by

(1) the Government or a department of the Government;

(2) A Government company as defined in Section 617 of the Companies Act, 1956;

(3) A Corporation (including a co-operative Society) established by or under a Central, Provincial or State Act, which is owned, controlled or managed by the Government;

(4) or local authority;"

ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2001ರನ್ವಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಹೆಸರುಗಳನ್ನು ಪಡೆದು 'ಸಿ' ಗುಂಪಿನ ಹುದ್ದೆಗಳು ಅಂದರೆ ಚಾಲಕರು ಮತ್ತು 'ಡಿ' ಗುಂಪಿನ ಹುದ್ದೆಗಳನ್ನು ಭರ್ತಿ ಮಾಡಲು ಆಸ್ಪದ ಇರುತ್ತದೆ.

ಅ) ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಸಂವಿಧಾನ ಅನುಚ್ಛೇದ 371 ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಒಂದು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಈಗಾಗಲೇ ಕಳುಹಿಸಿದೆ.

ಆ) ಹೌದು

ಈ) ಈಗಾಗಲೇ ತಿಳಿಸಿದಂತೆ, ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಸಂವಿಧಾನ ಅನುಚ್ಛೇದ 371 ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಒಂದು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಈಗಾಗಲೇ ಕಳುಹಿಸಿದೆ.

ಸದನದಲ್ಲಿ ಮಂಡಿಸಿದ ಮಸೂದೆಗಳು

1600 (1766) ಶ್ರೀ ಜಯಪ್ರಕಾಶ್ ಹೆಗಡೆ.ಕೆ (ಬ್ರಹ್ಮಾವರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999ರ ನವೆಂಬರ್ ತಿಂಗಳ ನಂತರ ಎಷ್ಟು ಮಸೂದೆಗಳನ್ನು ಸದನದ ಒಪ್ಪಿಗೆ ಪಡೆದು ಜಾರಿಗೆ ತರಲಾಗಿದೆ; ಒಪ್ಪಿಗೆ ಪಡೆದಿದ್ದರೂ ಜಾರಿಗೆ ತರಲಾಗದೇ ಇರುವ ಮಸೂದೆಗಳ ಸಂಖ್ಯೆ ಎಷ್ಟು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) 1999ರ ನವೆಂಬರ್ ನಿಂದ ಈ ದಿನಾಂಕದವರೆಗೆ 73 ವಿಧೇಯಕಗಳು ಅಧಿನಿಯಮಗಳಾಗಿವೆ. ಇವುಗಳಲ್ಲಿ 2 ಅಧಿನಿಯಮಗಳನ್ನು (ಅಧಿನಿಯಮ ಸಂಖ್ಯೆ : 2/2000 ಹಾಗೂ 25/2000) ಭಾಗಶಃ ಜಾರಿಗೊಳಿಸಲಾಗಿದೆ. ಹಾಗೂ 2 ಅಧಿನಿಯಮಗಳನ್ನು (ಅಧಿನಿಯಮ ಸಂಖ್ಯೆ : 20/2001 ಹಾಗೂ 33/2001) ಇವುಗಳನ್ನು ಈ ದಿನಾಂಕದವರೆಗೆ ಜಾರಿಗೊಳಿಸಿರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ತಿನ ಬೇಡಿಕೆ ಹಾಗೂ ಸರಬರಾಜು

1601 (1939) ಶ್ರೀ ಜಯ ಪ್ರಕಾಶ್ ಹೆಗ್ಡೆ.ಕೆ ಬಹ್ಮಾವರ : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಬೇಡಿಕೆ ಹಾಗೂ ಸರಬರಾಜು ಕುರಿತಾದ ವಿವರಗಳೇನು.

ಆ) ಇದೆ ಅವಧಿಯಲ್ಲಿ ಎಷ್ಟು ಪ್ರಮಾಣದ ವಿದ್ಯುತ್‌ನ್ನು ಖರೀದಿಸಲಾಗಿದೆ; ಅದಕ್ಕೆ ಪಾವತಿಸಲಾದ ಹಣದ ಮೊತ್ತ ಎಷ್ಟು;

ಇ) ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದಿಸಲು ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಬೇಡಿಕೆ ಹಾಗೂ ಸರಬರಾಜು ಪೂರೈಕೆಯ ವಿವರ ಈ ರೀತಿ ಇದೆ.

ಕ್ರ.ಸಂ.	ವಿವರಗಳು	ವರ್ಷ		
		1999-2000	2000-2001	2001-2002
1.	ವಿದ್ಯುತ್ ಬೇಡಿಕೆ (ದಶಲಕ್ಷ ಯೂನಿಟ್‌ಗಳಲ್ಲಿ)	29000	30000	31500
2.	ವಿದ್ಯುತ್ ಖರೀದಿಸಿದ ಪ್ರಮಾಣ (ದಶ ಲಕ್ಷ ಯೂನಿಟ್‌ಗಳಲ್ಲಿ)	26117	27798	29061
3.	ಪಾವತಿ ಮಾಡಿದ ಹಣ (ರೂ. ಕೋಟಿಗಳಲ್ಲಿ)	3147	3786	4836

ಆ) ಬೇಡಿಕೆಯನ್ನು ಪೂರೈಸಲು ಪೂರ್ವ ವಲಯದಿಂದ ಡಿಸೆಂಬರ್ 1999 ರಿಂದ ಪ್ರತಿದಿನ 100 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಆಮದು ಮಾಡಿಕೊಳ್ಳಲಾಗಿದೆ. ಸದರಿ ಸಾಲಿನಲ್ಲಿ ಪಿ.ಟಿ.ಸಿ ಸಂಸ್ಥೆಯಿಂದ ವಿದ್ಯುತ್ ಪಡೆಯಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಕೇಂದ್ರ ವಿದ್ಯುತ್ ಸ್ಥಾವರಗಳಿಂದ ಹಂಚಿದೆ ಉಳಿದಿರುವ ಪಾಲಿನಲ್ಲಿ 58 ಮೆಗಾವ್ಯಾಟ್ ಮತ್ತು ಪೂರ್ವವಲಯದಿಂದ 50 ಮೆಗಾ ವ್ಯಾಟ್ ಅಧಿಕ ವಿದ್ಯುತ್ತನ್ನು ರಾಜ್ಯಕ್ಕೆ ಪಡೆಯಲಾಗಿದೆ ಹಾಗೂ ರಾಜ್ಯದ ಸ್ವತಂತ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚು ದರ ವಿದ್ಯುತ್‌ನ್ನು ಅವಶ್ಯಕತೆಗೆ ಅನುಗುಣವಾಗಿ ಪಡೆಯಲಾಗುತ್ತಿದೆ. ಈ ಎಲ್ಲಾ ಪ್ರಯತ್ನಗಳಿಂದ ಬಂದ ಅಧಿಕ ವಿದ್ಯುತ್ತನ್ನು ಪಡೆದುಕೊಂಡು ಮಿಕ್ಕಿರುವ ಕೊರತೆಯನ್ನು ಲೋಡ್ ಷೆಡ್ಡಿಂಗ್ ಮುಖಾಂತರ ನಿರ್ವಹಿಸಲಾಗುತ್ತಿದೆ.

ದಾವಣಗೆರೆ ನಗರದಲ್ಲಿ ರಸ್ತೆಗಳ ದುರಸ್ತಿ

1603 (531) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ನಗರದಲ್ಲಿ ಬಹುತೇಕ ರಸ್ತೆಗಳು ಹಾಳಾಗಿ ಗುಡಿ ಬಿದ್ದು ಮಳೆಗಾಲದಲ್ಲಿ ವಾಹನಗಳು ಹಾಗೂ ನಾಗರೀಕರು ಓಡಾಡಲು ಅಸಾಧ್ಯವಾದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?